ಅ) ಹೌದು.

ಆ) ಕೇಂದ್ರ ಕಾರಾಗೃಹ ಬೆಂಗಳೂರು, ಮೈಸೂರು, ಬಳ್ಳಾರಿ, ಬೆಳಗಾಂ, ಗುಲ್ಬರ್ಗಾ ಹಾಗೂ ಜಿಲ್ಲಾ ಕಾರಾಗೃಹ ಮಂಗಳೂರು, ತುಮಕೂರು ಮತ್ತು ರಾಮನಗರದಲ್ಲಿ ಇಂತಹ ಕಾನೂನು ಬಾಹಿರ ಚಟುವಟಿಕೆಗಳು ನಡೆದಿರುತ್ತವೆ. ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಬಂದಿಗಳ ಅಧಿಕೃತ ಸಾಮರ್ಥ್ಯ 2100 ಇದ್ದು, ದಿನಾಂಕ 30-6-2009ಕ್ಕೆ 4904 ಬಂದಿಗಳನ್ನು ಬಂಧಿಸಿಡಲಾಗಿದೆ. ಅಧಿಕೃತ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಬಂದಿಗಳು ದಾಖಲಾಗಿರುವುದ ರಿಂದ ಹಾಗೂ ಈ ಇಲಾಖೆಯಲ್ಲಿ ಅಧಿಕೃತ ಸಾಮರ್ಥ್ಯಕ್ಕಿಂತ ಜಾಸ್ತಿಯಿರುವ ಬಂದಿಗಳಿಗನುಗುಣವಾಗಿ ಕಾವಲು ಸಿಬ್ಬಂದಿಗಳ ತೀವ್ರ ಕೊರತೆಯಿರುವುದರಿಂದ ಈ ರೀತಿಯ ಸಮಸ್ಯೆಗಳು ಉದ್ಭವಾಗಿರುತ್ತವೆ.

ಇ) ಕಾರಾಗೃಹಗಳಲ್ಲಿ ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆಗಟ್ಟಲು ಮುಖ್ಯದ್ವಾರದಲ್ಲಿ Handheld Metal Detector, Deep Search Metal Detector ಹಾಗೂ Door-Frame Metal Detectorಗಳನ್ನು ಅಳವಡಿಸಲಾಗಿದೆ. ಅಲ್ಲದೆ ಹಾಲಿ ಇರುವ ಕಾವಲು ಸಿಬ್ಬಂದಿಗಳಿಂದ ಮುಖ್ಯ ದ್ವಾರಕ್ಕೆ ಬಂದು ಹೋಗುವ ಹಾಗೂ ಬಂದಿಗಳ ಸಂದರ್ಶನಕ್ಕೆ ಬಂದು ಹೋಗುವ ಪ್ರತಿಯೊಬ್ಬ ವ್ಯಕ್ತಿಯನ್ನು ತಪಾಸಣೆ ಮಾಡಲು ಕ್ರಮ ಜರುಗಿಸಲಾಗಿದೆ. ಹಾಗೂ ಬಂದಿಗಳ ಬ್ಯಾರಕ್‌ಗಳಲ್ಲಿ ಅನಿರೀಕ್ಷಿತ ತಪಾಸಣೆಗಳನ್ನು ನಡೆಸಿ ಬ್ಯಾರಕ್‌ಗಳಲ್ಲಿ ಕಂಡು ಬರುವ ನಿಷೇಧ ವಸ್ತುಗಳನ್ನು ವಶಪಡಿಸಿಕೊಂಡು ನಿಷ್ಕ್ರೀಯೆಗೊಳಿಸಲಾಗುತ್ತಿದೆ. ಅಲ್ಲದೆ, ಕಾರಾಗೃಹಗಳ ಅಧೀಕ್ಷಕರಿಗೆ ಮೇಲಿಂದ ಮೇಲೆ ಸುತ್ತೋಲೆಗಳನ್ನು ಕಳುಹಿಸಿ ಕಾರಾಗೃಹಗಳ ಶಿಸ್ತು, ಬಿಗಿ ಭದ್ರತೆ ಹಾಗೂ ಸುರಕ್ಷತೆಯ ಬಗ್ಗೆ ಎಚ್ಚರ ವಹಿಸಲು ಸೂಚನೆಗಳನ್ನು ಸಹ ನೀಡಲಾಗುತ್ತಿದೆ. ಹಾಗೂ 342 ವೀಕ್ಷಕರು ಮತ್ತು 22 ಜೈಲರ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ತ್ವರಿತವಾಗಿ ಕ್ರಮ ಕೈಗೊಳ್ಳಲಾಗಿದೆ.

1013 ಶ್ರೀ ಮಂಜು ಎ. ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಿನಿಸ್ಟ್ರಿ ಆಫ್ ಕಮ್ಯುನಿಕೇಶನ್ ಗೃಹ ನಿರ್ಮಾಣ ಸಹಕಾರ ಸಂಘದ ಆರನೇ ಹಂತದ ಬಡಾವಣೆಯಲ್ಲಿ ನಿವೇಶನ ನೀಡಬೇಕಾಗಿರುವ ಸದಸ್ಯರ ಸಂಖ್ಯೆ ಎಷ್ಟು;

ಆ) ಸದಸ್ಯರು ನಿವೇಶನಕ್ಕಾಗಿ ಠೇವಣಿ ಹೂಡಿರುವ ಹಣವೆಷ್ಟು;

ಇ) ಈ ಸಹಕಾರ ಸಂಘದಲ್ಲಿ ನಿವೇಶನಕ್ಕಾಗಿ ಸುಮಾರು ಐದು ಸಾವಿರ ಸದಸ್ಯರು ಠೇವಣಿ ಹೂಡಿದ್ದಾರೆಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹೊಸಹಳ್ಳಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ಕೃಷಿ ವಲಯಕ್ಕೆ ಮೀಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಕೃಷಿ ವಲಯಕ್ಕೆ ಮೀಸಲಿರುವ ಪ್ರದೇಶದಲ್ಲಿ ನಿವೇಶನ ಹಂಚಿಕೆ ಮಾಡಲು ಸದರಿ ಸಂಘದವರು ತೀರ್ಮಾನಿಸಿದ್ದರಿಂದ ನಿವೇಶನಕ್ಕಾಗಿ ಹಣ ಕಟ್ಟಿರುವ ಸದಸ್ಯರುಗಳ ರಕ್ಷಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಊ) ಸಂಘದ ಬ್ಯಾಂಕ್ ಖಾತೆಗಳಲ್ಲಿ ಎಷ್ಟು ಹಣವಿದೆ; ಹಾಗೂ ಜಮೀನನ್ನು ಅಭಿವೃದ್ಧಿಪಡಿಸಲು ಯಾರಿಗೆ ವಹಿಸಲಾಗಿದೆ? (ವಿವರ ನೀಡುವುದು)

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು)

ಅ) ಮಿನಿಷ್ಟ್ರಿ ಆಫ್ ಕಮ್ಯುನಿಕೇಶನ್ ಗೃಹ ನಿರ್ಮಾಣ ಸಹಕಾರ ಸಂಘದ ಆರನೇಹಂತದ ಬಡಾವಣೆಯಲ್ಲಿ ಒಟ್ಟು 4,929 ಜನ ಸದಸ್ಯರಿಗೆ ನಿವೇಶನ ಹಂಚಿಕೆ ನೀಡಬೇಕಾಗಿದೆ.

ಆ) 4,929 ಜನ ಸದಸ್ಯರಿಂದ ಒಟ್ಟು ರೂ. 224,78,55,590–50ಗಳ ನಿವೇಶನ ಠೇವಣಿ ಸಂಗ್ರಹಿಸಲಾಗಿದೆ.

ಇ) ಹೌದು.

ಈ) ಸರ್ಕಾರದಿಂದ ಅನುಮೋದನೆಯಾಗಿರುವ Biaapa ಮಹಾ ಯೋಜನೆಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಹೊಸಹಳ್ಳಿ ಗ್ರಾಮದ ಉತ್ತರ ಭಾಗವು ಭಾಗಶಃ ವಸತಿ, ಸಾರ್ವಜನಿಕ/ಅರೆ ಸಾರ್ವಜನಿಕ ಭೂ ಉಪಯೋಗ ವಲಯದಲ್ಲಿ ಹಾಗೂ ಉಳಿದ ಪ್ರದೇಶವು ಕೃಷಿ ವಲಯದಲ್ಲಿರುತ್ತದೆ.

ಉ) ಸಂಘವು ಕೃಷಿ ವಲಯಕ್ಕೆ ಮೀಸಲಿಟ್ಟಿರುವ ಜಮೀನಿನಲ್ಲಿ ಬಡಾವಣೆ ನಿರ್ಮಿಸಲು ಉದ್ದೇಶಿಸಿರುವುದಿಲ್ಲ. ಸಂಘವು ದಿನಾಂಕ 1–7–200ರಂದು ಮೆ॥ ಎಂ.ಸಿ.ಎನ್ ಡೆವಲಪರ್ಸ್ ಅವರೊಂದಿಗೆ ಶುದ್ಧ ನಿವೇಶನಗಳನ್ನು ಟರ್ನ್‌ಕೀ ಆಧಾರದ ಮೇಲೆ ಪಡೆಯಲು ಒಪ್ಪಂದ ಮಾಡಿಕೊಂಡಿದ್ದ ದಿನಾಂಕಕ್ಕೆ ಸದರಿ ಜಮೀನುಗಳು ಕೃಷಿ ವಲಯಕ್ಕೆ ಸೇರಿರುವುದಿಲ್ಲ. ಆದರೆ ಬದಲಾದ Comprehensive Development Planನಂತೆ ಸದರಿ ಜಮೀನುಗಳು ಕೃಷಿ

ವಲಯದಲ್ಲಿ ಬರುತ್ತವೆ. ಸದರಿ ಜಮೀನುಗಳನ್ನು ಕೃಷಿಯೇತರ ವಲಯಕ್ಕೆ ಮಾರ್ಪಡಿಸಲು ಸರ್ಕಾರಕ್ಕೆ ಪ್ರಸ್ತಾವವನ್ನು ಸಲ್ಲಿಸಲಾಗಿರುತ್ತದೆ.

ಊ) ಸಂಘವು ವಿವಿಧ ಸಹಕಾರ ಬ್ಯಾಂಕುಗಳಲ್ಲಿ ಹೊಂದಿರುವ ಉಳಿತಾಯ ಖಾತೆಗಳಲ್ಲಿ ಒಟ್ಟು ರೂ. 8,12,01,445/–ಗಳು ಮತ್ತು ನಿಶ್ಚಿತ ಠೇವಣಿಗಳಲ್ಲಿ ರೂ. 53,69,43,921/–ಗಳು ಇರುತ್ತವೆ.

ಸಂಘವು ಜಮೀನನ್ನು ಅಭಿವೃದ್ಧಿಪಡಿಸಲು ಮೆ॥ ಎಂ.ಸಿ.ಎನ್. ಡೆವಲಪರ್ಸ್, ಕೊಡಿಗೇಹಳ್ಳಿ, ಸಹಕಾರ ನಗರ ಬೆಂಗಳೂರು ಇವರಿಗೆ ವಹಿಸಿರುತ್ತದೆ.

1087 ಶ್ರೀ ಎ. ಮಂಜು ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಸಹಕಾರ ನಗರ, ಸಹಕಾರ ಸಂಘ ಬಡಾವಣೆಯಲ್ಲಿ ಉದ್ಯಾನವನ ಮತ್ತು ನಾಗರೀಕ ಸೌಲಭ್ಯಗಳ ಜಾಗವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಶಕ್ಕೆ ತೆಗೆದುಕೊಂಡಿರುವ ನಿವೇಶನಗಳ ಸಂಖ್ಯೆ ಎಷ್ಟು;

ಆ) ಮಿನಿಷ್ಟ್ರಿ ಆಫ್ ಕಮ್ಯೂನಿಕೇಷನ್ ಸಹಕಾರ ಗೃಹ ನಿರ್ಮಾಣ ಸಂಘವು ನಿಯಮ ಬಾಹಿರವಾಗಿ ಮಾರಾಟ ಮಾಡಿರುವ (ಉದ್ಯಾನವನ ಮತ್ತು ಸಿ.ಎ. ಜಾಗ) ನಿವೇಶನಗಳ ಸಂಖ್ಯೆ ಎಷ್ಟು; ಯಾರು ಯಾರಿಗೆ ಮಾರಾಟ ಮಾಡಲಾಗಿದೆ)? (ವಿವರ ನೀಡುವುದು)

ಇ) ಇಂತಹ ನಿವೇಶನಗಳಲ್ಲಿ ಈಗಾಗಲೇ ನಿಯಮ ಬಾಹಿರವಾಗಿ ಕಟ್ಟಡ ಕಟ್ಟಿರುವುದು ಹಾಗೂ ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಸಹಕಾರ ಸಚಿವರು)

ಅ) ಸಂಘವು ಬೆಂಗಳೂರು ಸಹಕಾರ ನಗರ ಬಡಾವಣೆಯಲ್ಲಿ ಬಡಾವಣೆಯ ಒಟ್ಟು ಪ್ರದೇಶದ ಶೇಕಡಾ 15ರಷ್ಟು ಅಂದರೆ 1,21,283.28 ಚದರ ಮೀಟರ್ ಜಾಗವನ್ನು ಉದ್ಯಾನವನ ಮತ್ತು ನಾಗರೀಕ ಸೌಲಭ್ಯಗಳ ಸಲುವಾಗಿ ಬಿ.ಡಿ.ಎ. ಪ್ರಾಧಿಕಾರಕ್ಕೆ ವಿವಿಧ ದಿನಾಂಕಗಳಲ್ಲಿ ರಿಲಿಂಗ್ ಕ್ವಿಷ್ ಡೀಡ್ ಮೂಲಕ ಹಸ್ತಾಂತರಿಸಿರುತ್ತದೆ.

ಆ) ಸಂಘವು ಸಹಕಾರ ನಗರ ಬಡಾವಣೆಯಲ್ಲಿ ನಿಯಮ ಬಾಹಿರವಾಗಿ ಉದ್ಯಾನವನ ಮತ್ತು ಸಿ.ಎ. ಜಾಗಗಳಲ್ಲಿ ನಿವೇಶನಗಳನ್ನು ರಚನೆ ಮಾಡಿರುವುದಿಲ್ಲ. ಅನುಮೋದಿತ ನಕ್ಷೆಯಲ್ಲಿನ ಸಿ.ಎ. ಮತ್ತು ಉದ್ಯಾನವನ ಜಾಗವನ್ನು ಬಡಾವಣೆಯಲ್ಲಿಯೇ ಬೇರೆಡೆಗೆ ಸ್ಥಳಾಂತರಿಸಿದ್ದು, ಸದರಿ ಜಾಗದಲ್ಲಿ ಒಟ್ಟು 55 ನಿವೇಶನಗಳನ್ನು ರಚನೆ ಮಾಡಿ ಸಂಘದ ಸದಸ್ಯರಿಗೆ ಹಂಚಿಕೆ